ಸಾಕ್ಷಿದಾರನನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 22.10.2024.

**ಮುಖ್ಯ ವಿಚಾರಣೆ – ಪ್ರತಿವಾದಿ ಪರಃ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆಸಿದ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ.

**ಪಾಟೀ ಸವಾಲು – ವಾದಿ ಪರಃ ವಕೀಲರಿಂದಃ**

ನಾವು ಜನನ ದಾಖಲೆ ಮತ್ತು ಪಾಲಕರ ಹೇಳಿಕೆ ಆದಾರದ ಮೇಲೆ ಶಾಲೆಯಲ್ಲಿ ಹೆಸರು ದಾಖಲು ಮಾಡಿಕೊಂಡಿರುತ್ತೇವೆ. ವಾದಿಯ ತಂದೆಯ ಹೆಸರು ಮೇಹಬೂಬ ಅಂತಾ ಇದ್ದರು ಸಹ ಮೇಹಬೂಬಸಾಬ ಎಂದು ತಪ್ಪಾಗಿ ಶಾಲಾ ದಾಖಲಾತಿಗಳಲ್ಲಿ ನಮೂದು ಮಾಡಿಕೊಂಡಿರುತ್ತೀರಿ ಅಂದರೆ ಸರಿಯಲ್ಲಾ. ವಾದಿಯ ತಂದೆಯ ಹೆಸರು ಮೇಹಬೂಬ ಎಂದು ಇರುತ್ತದೆ ಅಂದರೆ ಸರಿಯಲ್ಲಾ. ನಮ್ಮ ನಜರ ಚೂಕಿನಿಂದ ವಾದಿಯ ತಂದೆಯ ಹೆಸರು ಮೇಹಬೂಬ ಬದಲು ಮೇಹಬೂಬಸಾ ಎಂದು ನಮೂದು ಮಾಡಿಕೊಂಡಿರುತ್ತೇವೆ ಅಂದರೆ ಸರಿಯಲ್ಲಾ. ಆದಾರ ಕಾರ್ಡ ಮಾಡುವ ಸಮಯದಲ್ಲಿ ಅವರು ಎಲ್ಲಾ ದಾಖಲಾತಿಗಳನ್ನು ನೋಡಿ ಆದಾರ ಕಾರ್ಡಗಳನ್ನು ನೀಡಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲಾ ಎನ್ನುತ್ತಾರೆ. ನಿಪಿ–01 ರಲ್ಲಿ ವಾದಿಯ 2 ರವರ ತಂದೆಯ ಹೆಸರು ಮೇಹಬೂಬ ಅಂತಾ ಇರುತ್ತದೆ ಅಂದರೆ ಸಾಕ್ಷಿ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ತಂದೆ ಹೆಸರು ತಿದ್ದುಪಡಿ ಮಾಡಲು ನಿಮಗೆ ಮೌಖಿಕವಾಗಿ ಹಾಗೂ ಲಿಖಿತವಾಗಿ ಅರ್ಜಿ ನೀಡಿದ್ದರು ತಿದ್ದುಪಡಿ ಮಾಡಿರುವುದಿಲ್ಲಾ ಅಂದರೆ ಸರಿಯಲ್ಲಾ. 2 ನೇ ವಾದಿಯ ಹೆಸರು ಆದಾರ ಕಾರ್ಡ ನಂತೆ ಹಾಗೂ ಜನನ ಪ್ರಮಾಣಪತ್ರದಂತೆ ನಮುದು

ಮಾಡಲು ತೊಂದರೆ ಇಲ್ಲಾ ಅಂದರೆ ಸಾಕ್ಷಿ ನ್ಯಾಯಾಲಯದಿಂದ ಆದೇಶವಾದರೆ ಮಾಡಲು ತೊಂದರೆ ಇಲ್ಲಾ ಎಂದು ನುಡಿಯುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.